**ಸಾಕ್ಷಿಯನ್ನು ದಿನಾಂಕಃ 13-02-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ವಾದಿ ಪರ ವಕೀಲರವರಿಂದಃ**

1. ಪತ್ರ ಬರೆಸಲು ಬಂದವರು ನೊಂದಣಿ ಮಾಡಿಸಲು ಬಂದ ದಿನವೇ ಅದನ್ನು ಪತ್ರವನ್ನು ಬರೆದು ತಯಾರು ಮಾಡುತ್ತೇವೆ. ದಾಖಲೆಗಳು ಸರಿಯಾಗಿದ್ದರೆ ಪತ್ರಗಳನ್ನು ನೊಂದಣಿ ಮಾಡಿಸುತ್ತೇವೆ. ನೊಂದಣಿ ಮಾಡಿಸಿಕೊಳ್ಳವರು ಬಂದವರು ಪರಿಚಯಸ್ತರೇ ಆಗಿರಬೇಕೆಂದು ನಿಯಮ ಇರುವುದಿಲ್ಲ. ಆ ದಿನ ನಾನು ಮರಿಯಮ್ಮ ಮತ್ತು ರೇಣುಕಮ್ಮನಿಗೆ ಸಂಬಂದಿಸಿದಂತೆ ಒಂದೇ ದಾಖಲೆಯನ್ನು ಬರೆದಿದ್ದೇನೆ. ಸಾಕ್ಷಿದಾರರ 2 ಸಹಿಗಳನ್ನು ದಾಖಲೆಗೆ ತೆಗೆದುಕೊಳ್ಳುತ್ತೇವೆ.

2. ನಿಡಿ 1 ದಾಖಲೆಯು ಆ ದಿನ ನಾನು ಬರೆದ ದಾಖಲೆ ಆಗಿರುತ್ತದೆ. ದಾಖಲೆಗೆ ನಾನು ಸಾಕ್ಷಿದಾರರ ಒಂದು ಸಹಿಯನ್ನು ಮಾತ್ರ ಮಾಡಿಸುತ್ತೇನೆ. ಕಳೆದ 50 ವರ್ಷಗಳಿಂದ ನಾನು ದಸ್ತಾವೇಜು ಬರಹಗಾರನಾಗಿ ಕೆಲಸ ಮಾಡುತ್ತಿದ್ದೇನೆ. ನಾನು 2005-06 ನೇ ಸಾಲಿನಲ್ಲಿ ಪರವಾನಿಗೆ ಪಡೆದುಕೊಂಡಿದ್ದೇನೆ. ಅದಕ್ಕಿಂತ ಮೊದಲು ನಾನು ಸ್ಟಾಂಪ್ ವೆಂಡರ್ ಆಗಿ ಕೆಲಸ ಮಾಡುತ್ತಿದ್ದೇನು. ನಿಡಿ 1 ರಲ್ಲಿ ಶೇಖರಪ್ಪ ಎಂಬ ಸಾಕ್ಷಿದಾರರ 2 ಸಹಿಗಳು ಇರುತ್ತವೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಅದರಲ್ಲಿ 1 ಸಹಿಯನ್ನು ನಾನು ಮಾಡಿಸಿದ್ದೇನೆ ಮತ್ತೊಂದು ಸಹಿಯನ್ನು ನೊಂದಣಿ ಕಚೇರಿಯಲ್ಲಿ ಮಾಡಿದ್ದಾಗಿ ಎಂದು ನುಡಿದರು. ಅದೇ ರೀತಿ 2 ನೇ ಸಾಕ್ಷಿದಾರರಾದ ರಾಮಾನಾಯ್ಕ ಕೂಡ 2 ಸಹಿಗಳನ್ನು ಹಾಕಿರುವರು ಅಂದರೆ ಸರಿ.

3. ಸಾಕ್ಷಿಯು ನಿಪಿ 24 ದಾಖಲೆಯು ನಾನು ಬರೆದ ದಾಖಲೆಯಾಗಿರುತ್ತದೆ. ನಿಡಿ 1 ರ ಸಾಕ್ಷಿದಾರರೇ ನಿಪಿ 24 ರ ದಾಖಲೆಗೂ ಸಹಿ

**ಸಾಕ್ಷಿಯ ಸಹಿ** 13.02.2026

ಮಾಡಿರುವರು ಅಂದರೆ ಸರಿ. ನಿಪಿ 24 ದಾಖಲೆಯು ವಿಲ್ಲು ರದ್ದತಿ ಪತ್ರ ದಾಖಲೆಯಾಗಿರುವುದು. ನನಗೆ ತಿಳಿದಿರುವಂತೆ ವಿಲ್ಲನ್ನು ಬರೆದಿರುವ ವ್ಯಕ್ತಿ ಮಾತ್ರ ಆತ ಬರೆದ ವಿಲ್ಲನ್ನು ರದ್ದು ಪಡಿಸಬಹುದು. ಬೇರೆ ಯಾರಿಗೂ ಆ ಅಧಿಕಾರ ಇರುವುದಿಲ್ಲ. ರದ್ದು ಮಾಡಬೇಕಾದ ವಿಲ್ಲಿನ ವಿವರಗಳ ಉಲ್ಲೇಖ ನಿಪಿ 24 ರಲ್ಲಿ ಕಂಡು ಬರುತ್ತದೆ ಅಂದರೆ ಸರಿ. ವಿಲ್ಲು ರದ್ದತಿ ಪತ್ರದಲ್ಲಿ ರದ್ದತಿ ಆಗಬೇಕಾದ ವಿಲ್ಲನ್ನು ಯಾರು ಯಾರಿಗೆ ಬರೆದುಕೊಟ್ಟಿದ್ದರು ಎಂಬ ಅಂಶವನ್ನು ಕೂಡ ಕಾಣಿಸುತ್ತೇವೆ ಅಂದರೆ ಸರಿ. ನಿಪಿ 24 ರಲ್ಲಿ ಯಾರು ಯಾರ ಹೆಸರಿಗೆ ಬರೆದ ವಿಲ್ಲನ್ನು ರದ್ದು ಪಡಿಸಬೇಕಾಗಿದೆ ಎಂದು ಕಾಣಿಸಿರುವುದಿಲ್ಲ ಅಂದರೆ ಸರಿ. ಆದರೆ ವಿಲ್ಲಿನ ದಾಖಲೆ ನಂಬರನ್ನು ಕಾಣಿಸಿದ್ದೇವೆ.

4. ವಿಲ್ಲು ರದ್ದತಿ ಪತ್ರವನ್ನು ನೊಂದಣಿ ಮಾಡಿಸುವ ಕಾಲಕ್ಕೆ ರದ್ದತಿ ಪತ್ರದಲ್ಲಿ ರದ್ದುಗೊಳಿಸಿದ ಮೂಲ ವಿಲ್ಲನ್ನಾಗಲೀ ಅಥವಾ ಅದರ ಪ್ರತಿಯನ್ನಾಗಲೀ ನೊಂದಣಿ ಕಚೇರಿಗೆ ಸಲ್ಲಿಸುವುದಿಲ್ಲ. ವಿಲ್ಲು ರದ್ದು ಮಾಡುವ ಸಮಯದಲ್ಲಿ ಉಪನೊಂದಣಿ ಅಧಿಕಾರಿಯವರು ರದ್ದತಿ ಪತ್ರವನ್ನು ವಿಲ್ಲಿನೊಂದಿಗೆ ತಾಳೆ ಮಾಡಿ ನೋಡುವುದಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

13-02-2026

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 13.02.2026